ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೧೩ನೇ ಸೆಪ್ಟೆಂಬರ್ ೧೯೫೭ ಭಾದ್ರಪದ ೧೦, ೧೮೭೯ ಶಕ.

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್)ರವರು ಪೀಠವನ್ನಲಂಕರಿಸಿದರು.]

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಹಿಂದೂ ಉತ್ತರಾಧಿಕಾರ ಅಧಿನಿಯಮಂ 1956 ಪುನರ್ವಿಲೋಕನ

೨೫೫ (ಬ) ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೆಣ್ಣು ಮಕ್ಕಳಿಗೆ ದಾಯಾದಿ ಸ್ವತ್ತಿನಲ್ಲಿ ಸಮ ಹಕ್ಕನ್ನು ನೀಡುವ ಬಗ್ಗೆ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ ರಾಜ್ಯಗಳು ಅನುಸರಿಸುತ್ತಿರುವ ಪದ್ಧತಿಯ ಮೇಲೆ ಹಿಂದೂ ಉತ್ತರಾಧಿಕಾರ ಅಧಿನಿಯಮವನ್ನು ಪುನರಾವಲೋಕಿಸುವ ಪ್ರಸ್ತಾಪವು ಸರ್ಕಾರದ ಮುಂದಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಇಲ್ಲ ಆದಾಗ್ಯೂ ಹೆಣ್ಣು ಮಕ್ಕಳಿಗೆ ದಾಯಾದಿ ಸ್ವತ್ತಿನಲ್ಲಿ ಸಮ ಹಕ್ಕನ್ನು ನೀಡಲು ಹಿಂದೂ ಉತ್ತರಾಧಿಕಾರ ಅಧಿನಿಯಮಂ ೧೯೫೬ನ್ನು ತಿದ್ದುಪಡಿ ಮಾಡುವ ಪ್ರಸ್ತಾಪವು ಸರ್ಕಾರದ ಪರ್ಯಾಲೋಚನೆಯಲ್ಲಿದೆ.

ಇಲ್ಲಿ 'ಇಲ್ಲ' ಎಂದು ಏತಕ್ಕೆ ಹೇಳಿದ್ದೇನೆಂದರೆ ನೀವು ಇಂಗ್ಲೀಷ್‌ನಲ್ಲಿ ಈ ಕೆಳಕಂಡಂತೆ ಪ್ರಶ್ನೆ ಕೇಳಿದ್ದೀರಿ.—

> Is there any proposal before the government for reviewing the Hindu Succession Act on the lines of Maharashtra and Andhra Pradesh ?"

ಅದಕ್ಕೋಸ್ಕರ ಇಲ್ಲಿ 'ಇಲ್ಲ' ಎಂದು ಹೇಳಿದ್ದೇನೆ ಆದರೆ ಇದರ ಮೂಲ ಪ್ರಸ್ತಾವನೆ ಸರ್ಕಾರದ ಮುಂದಿದೆ. Rules of transaction of business Rule. ೪೧ರ ಪ್ರಕಾರ ಈ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ತೆಗೆದುಕೊಳ್ಳುವುದಕ್ಕೆ ಕಳುಹಿಸಿಕೊಟ್ಟಿದ್ದೇವೆ.

ಶ್ರೀ ಕೆ. ಎಚ್. ಪಾಟೀಲ್.—ಸಂತೋಷ ಇನ್ನು ಎಷ್ಟು ದಿವಸಗಳಲ್ಲಿ ಈ ಕಾನೂನನ್ನು ತಿದ್ದುಪಡಿ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಸಾರ್ವಜನಿಕರ ಅಭಿಪ್ರಾಯ ತೆಗೆದುಕೊಂಡ ನಂತರ ಎಲ್ಲವನ್ನೂ ಕ್ರೋಢೀಕರಿಸಿ, ಎಲ್ಲರ ಅಭಿಪ್ರಾಯವನ್ನೂ ನಾವು ಗಣನೆಗೆ ತೆಗೆದುಕೊಂಡ ನಂತರ ಮುಂದಿನ ಹೆಜ್ಜೆ ಇಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಆಂಧ್ರ ಪ್ರದೇಶದಲ್ಲಿ ಅಲ್ಲಿನ ಹೆಣ್ಣುಮಕ್ಕಳಿಗೆ ಸಮಾನ ಆಸ್ತಿ ಹಕ್ಕನ್ನು ನೀಡುವ ಕಾನೂನನ್ನು ಜಾರಿಗೆ ತಂದಮೇಲೆ ಇಲ್ಲಿನ ಮಂಖ್ಯ ಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ ಅವರು ಒಂದು ವರ್ಷದ ಹಿಂದೆ ನಮ್ಮ ರಾಜ್ಯದಲ್ಲಿಯೂ ಇಂತಹ ಕಾನೂನು ಜಾರಿಗೆ ತರುವುದಾಗಿ ಹೇಳಿದರು. ಆದರೆ ಈಗ ಮಾನ್ಯ ಕಾನೂನು ಮಂತ್ರಿಗಳು ಇದಕ್ಕೆ ಸಂಬಂಧಪಟ್ಟ ಕಾನೂನನ್ನು ಜಾರಿಗೆ ತರಲು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ನಾನು ತಮಗೆ ಕೇಳ ತ್ತೇನೆ, ಏನೆಂದರೆ ವಿಧಾನ ಸಭಾ ಸದಸ್ಯರಿಗೆ ಸಂಬಳ ಜಾಸ್ತಿ ಮಾಡುವಾಗ ಸಾರ್ವಜನಿಕರ ಅಭಿಪ್ರಾಯ ಪಡೆಯಲಾಯಿತೇ? ಈಗ ಇದಕ್ಕೆ ಸಂಬಂಧಪಟ್ಟಂತೆ ಸಾರ್ವಜನಿಕರ ಅಭಿಪ್ರಾಯ ಪಡೆಯ ಬೇಕೆಂದಿದ್ದರೆ, ಇದಕ್ಕೆ ಸಂಬಂಧ ಪಟ್ಟ ಡ್ರಾಫ್ಟ್ ನೋಟಿಫಿಕೇಷನ್ ತಯಾರು ಮಾಡಿದ್ದೀರಾ ? ಇದನ್ನು ತಯಾರು ಮಾಡಿದರೆ, ಸಾರ್ವ ಜನಿಕರ ಅಭಿಪ್ರಾಯಕ್ಕಾಗಿ ಯಾವಾಗ ಕಳುಹಿಸಿ ಕೊಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಬಸವಲಿಂಗಪ್ಪನವರ ಅಭಿಪ್ರಾಯ ನನಗೆ ವೇದ್ಯವಾಗಿದೆ. ಉದ್ದೇಶಪೂರ್ವಕವಾಗಿ ಇದನ್ನು ತಡೆಹಿಡಿಯುವಂತಹ ಉದ್ದೇಶವನ್ನು ನಾವು ಇಟ್ಟುಕೊಂಡಿಲ್ಲ. ಆಂಧ್ರ ದಲ್ಲಿ ರಿಪೋರ್ಟರಲ್ಲಿಯೇ ಈ ಬಗ್ಗೆ ಕಾನೂನು ಮಾಡಬೇಕೆಂದು ತೀರ್ಮಾನ ಮಾಡಿದ್ದರೂ ಸಹ ನಾನು ನಿನ್ನೆ ಅಲ್ಲಿಗೆ ಫೋನ್ ಮಾಡಿ ತಿಳಿದುಕೊಂಡ ಪ್ರಕಾರ, ಇತ್ತೀಚೆಗೆ ಅಲ್ಲಿನ ಕಾನೂನು ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದುಕೊಂಡು ಈಗ ಜಾರಿಗೆ ಬರುವ ಹಂತದಲ್ಲಿದೆ. ಇಲ್ಲಿ ನಾವು ನಿಯಮಗಳ ಪ್ರಕಾರ ಕರಡು ಪ್ರತಿ ಯನ್ನು ತಯಾರಿಸಿ ಸಾರ್ವಜನಿಕರ ಮುಂದೆ ಇಟ್ಟಿದ್ದೇವೆ ಆದಷ್ಟು ಬೇಗ ಈ ಕಾನೂನನ್ನು ಜಾರಿಗೆ ತರುವ ವ್ಯವಸ್ಥೆ ಮಾಡುತ್ತೇವೆ. ನಂತರ ರೂಲ್ಸ್ ಪ್ರಕಾರ ಮಾಡತಕ್ಕಂಥಾದ್ದು ಸಾರ್ವಜನಿಕರ ಗಮನಕ್ಕೆ ಇದನ್ನು ತಂದು ಸಾರ್ವಜನಿಕರ ಅಭಿಪ್ರಾಯಗಳನ್ನು ತೆಗೆದುಕೊಂಡು ಅವುಗಳನ್ನೆಲ್ಲಾ ಕ್ರೋಢೀ ಕರಿಸಿ ಇದು ಸರಿಯಾಗಿದೆ ಎಂದು ಸಮ್ಮತಿ ಬಂದರೆ ಇದಕ್ಕೆ ಹೆಚ್ಚು ಪ್ರಬಲವಾದಂಥ ಮನ್ನಣೆ ಸಿಗತಕ್ಕ ಸನ್ನಿವೇಶ ಇದೆ. ಆದ್ದರಿಂದ ಸಾರ್ವಜನಿಕರ ಅಭಿಪ್ರಾಯಗಳನ್ನು ತೆಗೆದುಕೊಳ್ಳಬೇಕು ಎನ್ನುವಂಥ ವಿಚಾರವನ್ನು ಇಟ್ಟುಕೊಂಡಿದೆ.

ಶ್ರೀ ಬಿ. ಬಸವಲಿಂಗಪ್ಪ.—ಯಾವಾಗ ಮಾಡುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಬೇಗ ಮಾಡುತ್ತೇವೆ, ತಾರೀಖು ಕೊಡುವುದಕ್ಕಾಗುವುದಿಲ್ಲ!

ಶ್ರೀ ಎಂ. ವೀರಪ್ಪಾರ್ಜುನ ಖರ್ಗೆ.—ಇದನ್ನು ಮಾಡುವುದರಿಂದ ತಮಗೆ ಲಾಭವೋ ನುಕ್ಸಾನೋ?

ಶ್ರೀ ಎ. ಲಕ್ಷ್ಮೀಸಾಗರ್.—ಕಾನೂನು ಮಾಡುವಾಗ ಒಬ್ಬರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡುವುದಕ್ಕಾಗುವುದಿಲ್ಲ. ಇದನ್ನು ಮಾಡುವುದರಿಂದ ಮಾನ್ಯ ಖರ್ಗೆ ಯವರಿಗೆ ಅನಾನುಕೂಲವಾದರೂ ಆಗಬಹುದು ನನಗಂತೂ ಅನುಕೂಲವೂ ಇಲ್ಲ ಅನಾನುಕೂಲವೂ ಇಲ್ಲ.

ಮೊಹರು ಹಾಕಿರುವ ಸಾರಾಯಿ ಸೀಸೆಯ ಬೆಲೆ

(೪) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ರಾಜ್ಯ ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಾರಾಯಿ ಮಾರುವ ಕಂಟ್ರಾಕ್ಟರುಗಳಿಗೆ ಲೀಟರ್ ಒಂದಕ್ಕೆ ಮೊಹರು ಹಾಕಿರುವ ಸೀಸೆಯ ಬೆಲೆ ಎಷ್ಟು ಹಾಗೂ ಬಾಟಲಿಗೆ ಲೀಟರ್ ಒಂದಕ್ಕೆ ನಿಗಧಿಪಡಿಸಿರುವ ಬೆಲೆ ಎಷ್ಟು ?

ಆ) ಸಾರಾಯಿ ಮಾರಾಟ ಮಾಡಲು ಗುತ್ತಿಗೆದಾರರಿಗೆ ನೀಡುವಾಗ ಷರತ್ತುಗಳನ್ನು ಅನುಸರಿ ಸುವ ನಿಯಮಗಳೇನು ಹಾಗೂ ಷರತ್ತುಗಳೇನಾದರೂ ಹಾಕಲಾಗುವುದೇ ?

ಇ) ಹಾಗಿದ್ದಲ್ಲಿ, ಸದರಿ ನಿಯಮಗಳನ್ನು ಉಲ್ಲಂಘಿಸಿದವರ ಮೇಲೆ ಕೈಗೊಂಡ ಕ್ರಮಗಳೇನು ?

ಈ) ೧೯೮೬-೮೭ನೇ ಸಾಲಿನಲ್ಲಿ ಗುತ್ತಿಗೆದಾರರಿಂದ ಸರ್ಕಾರಕ್ಕೆ ಬಂದ ಹಣವೆಷ್ಟು ?